# ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 497.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 194.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics, but used a different Ankita.

ರಾಗ: ಮುಖಾರಿ ತಾಳ: ಝಂಪೆ

ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ || ಪ ||
ಹಡೆದವಳ ಎದೆ ಕೊರಳ ಕೊಯ್ವಂಥ ಚೂರಿ || ಅಪ ||

ಮಾತು ಕಲಿತರೆ ಏನು ಮಹ ಜಾಣೆಯಾದರೇನು
ಚಾತುರ್ಯವಿದ್ದರೇನು ಚೆಲುವೆಯಾದರೇನು
ರಾಶಿ ಹಣವಿದ್ದರೇನು ಏನು ಪೇಳಿದರೇನು
ರೀತಿ ಕೆಟ್ಟ ಜನ್ಮ ಪೊರೆಯಬೇಕಲ್ಲ || 1 ||

ಹೊರಗೆ ಬರಲಿಕೆ ಸಲ್ಲ ಇದಿರಾಗಿ ಇರಸಲ್ಲ
ಅಡುಗೆಗೆ ಯೋಗ್ಯಳಲ್ಲ ಹರಿಯು ತಾನೆ ಬಲ್ಲ
ಮರಿಯಾದೆಗಳು ಇಲ್ಲ ಬಲು ಹಗುರ ರಾಜ್ಯಕ್ಕೆಲ್ಲ
ಸರ್ವ ರೀತಿಲಿ ಕೆಟ್ಟ ಜನ್ಮ ಪೊರೆಸಲ್ಲ || 2 ||

ಅತ್ತೆ ತನ್ನಯ ಮಗಗೆ ಮೃತ್ಯುವು ಎಂತೆಂಬುವಳು

ಹುಟ್ಟಿದಾ ಮನೆಯವರು ದೂಷಿಸುವರು
ಎಷ್ಟು ಹೇಳಲಿ ಬಹಳ ತುಚ್ಛವನೆ ಮಾಡುವರು
ಅಕ್ಕ ತಂಗಿಯರಿಗೆ ದಿಕ್ಕು ಎಂಬುವರು || 3 ||

ಉಪಕಾರ ಮಾಡಿದರೆ ಗತಿಯು ನೀನೆಂಬುವರು
ಅತಿ ಶ್ರಮವೆಂದರೂ ಆದರಿಸರು
ವಿಪರೀತ ಹಣವಿದ್ದರಪಹರಿಸಿ ತಿಂಬುವರು
ಅತಿ ದೈನ್ಯದಿಂ ಬೇಡೆ ಬಾಯ ಬಡಿಸುವರು || 4 ||

ಚಾಕರಿಯ ಮಾಡಿದರೆ ಆಚೀಚೆಲಾಡುವರು
ರಾಶಿ ಅನ್ನವನುಂಡಳೆಂದು ದೂರುವರು
ಈಸು ಸೈರಿಸಿ ಕೊಂಡು ಏಕಾಗ್ರದಲಿ ಕುಳಿತು
ಶ್ರೀಶ ಪುರಂದರವಿಠಲನ ನೆನೆಯೆ ನಾರಿ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ವಿಧವೆಯರ ಮೂಕವೇದನೆಗಳಿಗೆ ಸ್ಪಂದಿಸಿರುವ ಈ ಪದ ಈ ನಿರ್ಭಾಗ್ಯಳನ್ನು ಸಮಾಜ ಹಾಗೂ ಕುಟುಂಬದವರು ಅನಾದರಿಸುವ ಬಗೆಗಳನ್ನು ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ. ಕವಿಗೆ ಆಕೆಯ ಬಗೆಗೆ ಅಪಾರ ಅನುಕಂಪೆ ಇರುವುದೂ ಸಮಾಜದ ಬಗೆಗೆ ಆಕ್ರೋಶ ಇರುವುದೂ ಇಲ್ಲಿ ಸ್ಪಷ್ಟವಾಗುತ್ತದೆ. ವಿಧವೆಯ ರೂಪ, ಯೌವನ, ಬುದ್ಧಿಮತ್ತೆ, ಶ್ರೀಮಂತಿಕೆ, ಸೇವಾಚಾತುರ್ಯ ಶ್ರಮಗಾರಿಕೆ ಇವೆಲ್ಲವೂ ಆಕ್ಷೇಪಿಸುವರ ಬಾಯಿಗೆ ಒಳ್ಳೆಯ ಆಹಾರವಾಗಿ ಬಿಡುತ್ತವೆ. ಹೆತ್ತಮನೆ ಹೊಕ್ಕಮನೆಗಳೆರಡರಿಂದಲೂ ದೂಷಣೆಯನ್ನೇ ಪಡೆಯುವ ಆಕೆಯ ಸ್ಥಿತಿ ಚಿಂತಾಜನಕ.

**Classification:** Keerthane
**Ankita:** Shrisha Purandara Vittala
**Location:** NA
**Category:** Jeevana Darshana
**Sub-Category:** pati, hengasu, hennu, kannu, rokka, janma, aduge, Krishna, desha, atte, maga, huttu, mane, dainya, anna,
**Pravachana:** NA
**Explanation:** NA